# ವಚನ ಸಾಹಿತ್ಯ ಮತ್ತು ಸಾಮಾಜಿಕ ಬದಲಾವಣೆ

ಆಶಾ ಸಿ.ಎಸ್.
ಅಸಿಸ್ಟೆಂಟ್ ಪ್ರೊಫೆಸರ್
ಕನ್ನಡ ವಿಭಾಗ,
ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು,
ಜೆ.ಪಿ.ನಗರ, ಬೆಂಗಳೂರು – ೭೮.

ನಾರಾಯಣಸ್ವಾಮಿ ಎಸ್.ಜಿ.
ಅಸೋಸಿಯೇಟ್ ಪ್ರೊಫೆಸರ್
ಕನ್ನಡ ವಿಭಾಗ,
ವಿ.ಇ.ಟಿ. ಪ್ರಥಮ ದರ್ಜೆ ಕಾಲೇಜು,
ಜೆ.ಪಿ.ನಗರ, ಬೆಂಗಳೂರು – ೭೮.

ಜಡ್ಡುಗಟ್ಟಿದ ಕಾಲಗಳಲ್ಲಿ, ಸೂಕ್ಷ್ಮ ಸಂವೇದನೆ ಉಳ್ಳವರೂ, ವಿಚಾರವಂತರೂ ಆದ ಕೆಲವೇ ಜನ ತಮ್ಮ ಸುತ್ತಣ ಪರಿಸ್ಥಿತಿಯನ್ನೂ ಮತ್ತು ಅದನ್ನು ನಿಯಂತ್ರಿಸಿಕೊಂಡು ಬಂದ ರೂಢಿಗತವಾದ ವ್ಯವಸ್ಥೆ ಹಾಗೂ ಸಂಪ್ರದಾಯಗಳನ್ನೂ ಪ್ರಶ್ನಿಸಲು ತೊಡಗುತ್ತಾರೋ, ಪ್ರತಿಭಟಿಸಲು ತೊಡಗುತ್ತಾರೋ ಅಂತಹ ಕಾಲಗಳನ್ನು ಸಂಕ್ರಮಣ ಕಾಲಗಳೆಂದು ಕರೆಯಬಹುದು. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಇಂತಹ ಒಂದು ಸಂಕ್ರಮಣ ಕಾಲ. ಈ ಸಂಕ್ರಮಣದ ಮುಖ್ಯ ಪ್ರೇರಣೆ ವೀರಶೈವ ಸಾಮಾಜಿಕ, ಸಾಹಿತ್ಯಕ ವಿಚಾರ ಕ್ರಾಂತಿ ಎಂದು ಜಿ.ಎಸ್.ಶಿವರುದ್ರಪ್ಪ ಹೇಳುತ್ತಾರೆ.

ಭಾರತ ದೇಶದ ಪ್ರಾಚೀನ ಕಾಲದ ಸಾಮಾಜಿಕ ರಚನೆಯಲ್ಲಿ "ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರ" ಎಂಬ ವರ್ಣಗಳಿದ್ದವು. ದೇವರ (ಬ್ರಹ್ಮ) ಮುಖದಿಂದ 'ಬ್ರಾಹ್ಮಣ', ತೋಳುಗಳಿಂದ 'ಕ್ಷತ್ರಿಯ' ತೊಡೆಗಳಿಂದ 'ವೈಶ್ಯ', ಪಾದಗಳಿಂದ ಶೂದ್ರರು ಹುಟ್ಟಿ ಬಂದಿದ್ದಾರೆ. ಪಾದವು ಹೇಗೆ ದೇಹದ ತೂಕವನ್ನು ಹೊರುತ್ತದೆಯೋ ಹಾಗೆಯೇ ಶೂದ್ರರು 'ಬ್ರಾಹ್ಮಣ/ಕ್ಷತ್ರಿಯ/ವೈಶ್ಯರ' ಸೇವೆಯಲ್ಲಿಯೇ ತಮ್ಮ ಬದುಕನ್ನು ಕಳೆಯಬೇಕು ಎಂಬ ಸಾಮಾಜಿಕ ಕಟ್ಟಳೆಯು ಅಂದಿನ ಸಮಾಜದಲ್ಲಿತ್ತು. ಈ ವರ್ಣ ವ್ಯವಸ್ಥೆಯು ವ್ಯಕ್ತಿಗಳಲ್ಲಿ ಶ್ರೇಷ್ಠ ಕನಿಷ್ಠರೆಂಬ ತಾರತಮ್ಯವನ್ನು ಕಲ್ಪಿಸುತ್ತಾ ಹೋಯಿತು. ಈ ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣನು ಮೇಲಿನ ಹಂತದಲ್ಲಿದ್ದರೆ, ಶೂದ್ರನು ಕೆಳ ಹಂತದಲ್ಲಿದ್ದನು. ಇನ್ನುಳಿದ 'ಕ್ಷತ್ರಿಯರು' ಮತ್ತು 'ವೈಶ್ಯರು' ನಡುವಣ ಹಂತದಲ್ಲಿದ್ದರು. ಕೆಳಹಂತದಲ್ಲಿದ್ದ 'ಶೂದ್ರ'ನಿಗೆ ತಿಳುವಳಿಕೆಯನ್ನು ನೀಡಬಾರದು; ವೇದಗಳನ್ನು ಕಲಿಸಬಾರದು; ಓದಲು ಬಿಡಬಾರದು; ಒಂದು ವೇಳೆ ಶೂದ್ರನು ಸ್ವಪ್ರಯತ್ನದಿಂದ ವೇದಗಳನ್ನು ಕಲಿತು ಓದಲು ತೊಡಗಿದರೆ ಆತನ ಕಿವಿಗೆ ಕಾದ ಎಣ್ಣೆಯನ್ನು ಸುರಿಯುತ್ತಿದ್ದರು. ಅವರನ್ನು ಸಮಾಜದಲ್ಲಿ ಅತಿ ಕೀಳಾಗಿ ನಡೆಸಿಕೊಳ್ಳುತ್ತಿದ್ದರು.

ಹತ್ತನೆ ಶತಮಾನ ಮತ್ತು ಅದಕ್ಕೆ ಪೂರ್ವದ ಕಾಲದಲ್ಲಿ ಪ್ರಚಲಿತದಲ್ಲಿದ್ದ ವೈದಿಕ ಮತ್ತು ಜೈನ ಧರ್ಮಗಳಲ್ಲಿ ಈ ಮೊದಲೇ ಹೇಳಿದಂತಹ ವರ್ಣಪದ್ಧತಿಯಿಂದ ಸಮಾಜದಲ್ಲಿ ವ್ಯಕ್ತಿಗಳ ನಡುವೆ ಅಸಮಾನತೆನ್ನು ಹುಟ್ಟು ಹಾಕಿತ್ತು. ಅಲ್ಲದೇ ಆ ಸಮಯದಲ್ಲಿ ಕವಿಗಳೆಲ್ಲ ಒಂದು ಪ್ರಭುತ್ವದ ಅಡಿಯಲ್ಲಿ ಇದ್ದು ಧರ್ಮ ಮತ್ತು ತಮ್ಮ ಆಶ್ರಯದಾತನಾದ ರಾಜನನ್ನು ಕುರಿತು ಕಾವ್ಯಗಳನ್ನು ಬರೆಯುತ್ತಿದ್ದರು. ಅಲ್ಲದೇ ಬಳಸುತ್ತಿದ್ದ ಭಾಷೆಯು ಸಂಸ್ಕೃತ ಬಲಿಷ್ಠವಾಗಿದ್ದು, ವಿದ್ಯೆಯನ್ನು ಕಲಿತ ಪಂಡಿತ ಮಾನ್ಯರಿಗೆ ಮಾತ್ರ ತಿಳಿಯುವಂತಹ ಭಾಷೆಯಾಗಿತ್ತು. ಹಾಗಾಗಿ ಸಾಹಿತ್ಯವು ಬರೀ ಮೇಲ್ವರ್ಗದವರ, ಸ್ವತ್ತಾಗಿ ಉಳಿದಿತ್ತು.

ಆದರೆ ಹನ್ನೆರಡನೇ ಶತಮಾನದಲ್ಲಿ ಬಂದ ವಚನ ಸಾಹಿತ್ಯವು ಪ್ರಭುತ್ವದಿಂದ ಹೊರಬಂದು ಅರಮನೆಯ ಮುಂದೆ ಮಹಾಮನೆಯಲ್ಲಿ ಎಲ್ಲಾ ಶಿವಶರಣರು ಸೇರಿ ಚರ್ಚೆ, ಗೋಷ್ಠಿಗಳನ್ನು ಮಾಡುತ್ತಿದ್ದರು. ಅಲ್ಲದೇ ಹೀಗೆ 'ಒಗ್ಗೂಡಿದವರೆಲ್ಲ ಯಾವ ಪಂಡಿತರಲ್ಲ; ಉತ್ತಮ ಜಾತಿಯಲ್ಲಿ ಹುಟ್ಟಿದರೆ ಮಾತ್ರ ವಿಚಾರ ಮಾಡುವ ಸಾಮರ್ಥ್ಯವಿರುತ್ತದೆ' ಎಂಬ ಭ್ರಮೆಗೆ ಒಳಗಾದವರಲ್ಲ; ತಮ್ಮ ವೈಚಾರಿಕತೆಯಿಂದ ತಾವೆಂತಹ ಕ್ರಾಂತಿಯನ್ನು ಮಾಡುತ್ತಿದ್ದೇವೆ ಎನ್ನುವುದನ್ನೂ ತಿಳಿದವರಾಗಿರಲಿಲ್ಲ; ಇಲ್ಲಿ ಯಾವುದೇ ಜಾತಿ-ಧರ್ಮ-ಜನಾಂಗ ಎಂಬ ತಾರತಮ್ಯವಿಲ್ಲದೇ ಪ್ರತಿಯೊಬ್ಬರಿಗೂ ವಚನಗಳನ್ನು ಕಟ್ಟಲು ಸ್ವತಂತ್ರರಾಗಿದ್ದರು. ಅಲ್ಲದೇ ಜನಸಾಮಾನ್ಯರು ಮಾತನಾಡುವ 'ಆಡುವ ಮಾತಿನಲ್ಲಿ' ವಚನಗಳನ್ನು ಕಟ್ಟಲಾಯಿತು:-

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ,

ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ. ತನ್ನ

ಬಣ್ಣಿಸಬೇಡ, ಇದಿರ ಹಳಿಯಲು ಬೇಡ.

ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ!

ಇದೇ ನಮ್ಮ ಕೂಡಲಸಂಗಮನೊಲಿಸುವ ಪರಿ.

ಹೀಗೆ ಬಹಳ ಸುಲಭವಾಗಿ ಪ್ರತಿಯೊಬ್ಬರಿಗೂ ಅರ್ಥವಾಗುವ ರೀತಿ ವಚನಗಳನ್ನು ರಚಿಸಲಾಗಿದೆ.

ನಮ್ಮ ಜೈನ ಧರ್ಮ ಮತ್ತು ವೈದಿಕ ಧರ್ಮಗಳಲ್ಲಿ ಗಂಡು ಮತ್ತು ಹೆಣ್ಣು ಎಂಬ ತರತಮ ಭಾವವಿದೆ. ವೈದಿಕ ಧರ್ಮದ ಪ್ರಕಾರ ಹೆಣ್ಣು ಮನೆಯ ನಾಲ್ಕು ಗೋಡೆಗಳ ಮಧ್ಯೆ ಜೀವನ ಸಾಗಿಸಬೇಕು. ಮನೆಯ ಹೊರಗಿನ ಆಡಳಿತಾತ್ಮಕ ವಿಷಯಗಳಿಂದ ಅವಳು ವಂಚಿತಳು. ಹಾಗೆಯೇ ಜೈನಧರ್ಮದ ಪ್ರಕಾರ ಹೆಣ್ಣುಮಕ್ಕಳಿಗೆ ಮುಕ್ತಿಯಿಲ್ಲ. ಅವಳಿಗೆ ಮುಕ್ತಿ ದೊರೆಯಬೇಕೆಂದರೆ ಮತ್ತೆ ಅವಳು ಗಂಡಾಗಿ ಹುಟ್ಟಿ ಜೀವನವನ್ನು ನಡೆಸಿ ಮುಕ್ತಿ ಪಡೆಯಬೇಕೆಂದು ಹೇಳುತ್ತಾರೆ. ಪುರುಷರಂತೆ ಜನಿವಾರವನ್ನು ಧರಿಸುವ ಹಕ್ಕಿಲ್ಲ. ಬೌದ್ಧಧರ್ಮವಂತೂ ಮೊದಲೆಲ್ಲಾ ಸ್ತ್ರೀಯರಿಗೆ ದೇವಾಲಯಗಳ ಪ್ರವೇಶಕ್ಕೆ ಅನುಮತಿ ನೀಡಿರಲಿಲ್ಲ. ಈ ಸಮಾಜದಲ್ಲಿ ಗಂಡು



Scanned with CamScanner

ಮೊದಲ ದರ್ಜೆಯ ಪ್ರಜೆ, ಹೆಣ್ಣು ಎರಡನೇ ದರ್ಜೆಯ ಪ್ರಜೆ ಎಂದು ಪರಿಗಣಿಸಲಾಗಿದೆ. ಹಾಗೆಯೇ ಹತ್ತರಿಂದ ಹನ್ನೆ
ಶತಮಾನದವರೆಗೆ ಯಾವುದೇ ಹೆಣ್ಣು ಸಾಹಿತ್ಯ ರಚನೆ ಮಾಡಿದ ಉಲ್ಲೇಖ ನಮಗೆ ಸಿಗುವುದಿಲ್ಲ.

ಇಂತಹ ಕಾಲಘಟ್ಟದಲ್ಲಿ ಹನ್ನೆರಡನೇ ಶತಮಾನದಲ್ಲಿ ಹಲವಾರು ಸ್ತ್ರೀಯರು (ಅಕ್ಕಮಹಾದೇವಿ, ಮುಕ್ತಾಯಕ್ಕ, ... ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಸೂಳೆ ಸಂಕವ್ವ, ನೀಲವ್ವ, ಕಾಳವ್ವೆ ಇನ್ನೂ ಮುಂತಾದವರು) ಸಾಹಿತ್ಯ ರಚನೆ ಮಾಡಿ... ಕಾಣಬಹುದು. ಅಲ್ಲದೇ ವಚನಕಾರರೆಲ್ಲರೂ "ಲಿಂಗ ಪತಿ, ಶರಣ ಸತಿ" ಎಂದು ನಂಬಿದವರಾಗಿದ್ದರು. ಹೀಗಾಗಿ ಜೇಡರದಾಸಿ... ಗಂಡು-ಹೆಣ್ಣಿಗೆ ಇರುವ ವ್ಯತ್ಯಾಸವನ್ನು ಹೀಗೆ ಹೇಳಿದ್ದಾನೆ –

"ಮೊಲೆ ಮುಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು

ನಡುವೆ ಸುಳಿವಾತ್ಮನು ಗಂಡೂ ಅಲ್ಲ,

ಹೆಣ್ಣೂ ಅಲ್ಲ ಕಾಣಾ ರಾಮನಾಥ"

ಹೀಗೆ ಲಿಂಗ ತಾರತಮ್ಯದ ಬಗ್ಗೆ ಅತ್ಯಂತ ತಾರ್ಕಿಕವಾಗಿ ಮಾತನಾಡುತ್ತಾರೆ. ಹಾಗೆಯೇ ಸ್ತ್ರೀಯರಿಗೆ ವಚನಕಾರರಿಂದ... ಧಾರ್ಮಿಕ ಸ್ವಾತಂತ್ರ್ಯ; ಗಂಡಿಗೆ ಸರಿಸಮಾನವಾಗಿ ಗೋಷ್ಠಿಗಳಲ್ಲಿ ಕೂತು ವಿಚಾರ ವಿನಿಮಯ ಮಾಡುವ ಅವಕಾಶವು ಲಭಿಸಿತು.

ದೇವರನ್ನು ಕುರಿತ ಕಲ್ಪನೆಯು ನಮ್ಮ ಪುರಾಣ ಆಗಮಗಳ ಕಾಲದಲ್ಲಿ ಅವತಾರ ಕಲ್ಪನೆಗಳಿಂದಾಗಿ ಅತಿ ರಂಜಕವಾಗಿ ಮೂಡಿ ಬಂದಿದೆ. ಅಸಂಖ್ಯ ದೇವರುಗಳೂ ಅವುಗಳ ಲೀಲೆಗಳನ್ನು ಕುರಿತ ಪುರಾಣಗಳೂ, ಅನೇಕ ಜಾತಿ-ಮತ-ಪಂಥಗಳ ಹುಟ್ಟು... ಅರ್ಥವಿಲ್ಲದ ಆಚಾರ-ವಿಚಾರಗಳ ಹುಟ್ಟಿಗೆ ಮತ್ತು ದೇವಾಲಯ ನಿರ್ಮಾಣಕ್ಕೆ ಕಾರಣವಾಯಿತು. ದೇವಸ್ಥಾನಗಳ ನಿರ್ಮಾಣ ಪುಣ್ಯ... ಕೆಲಸಗಳೆಂದು ಉಳ್ಳವರನ್ನು ಶಾಸ್ತ್ರಗಳು ನಂಬಿಸಿದ್ದವು. ದೇವಸ್ಥಾನಗಳು ... ಸಂಪಾದನೆಯ ಅಥವಾ ಸ್ವರ್ಗ ಸುಖ ಪ್ರಾಪ್ತಿಯ ಕೆಲಸಗಳೆಂದು ... ಸುಲಿಗೆ ಮಾಡುವ ತಂತ್ರಗಳಾದವು. ಇಂತಹ ಹಿನ್ನೆಲೆಯಲ್ಲಿ ದೇವರು ... ಮೇಲ್ವರ್ಗದವರ ಸ್ವತ್ತುಗಳಾಗಿ ಭಕ್ತಾದಿಗಳನ್ನು ಸುಲಿಗೆ ಮಾಡುವ ತಂತ್ರಗಳಾದವು. ಇಂತಹ ಹಿನ್ನೆಲೆಯಲ್ಲಿ ದೇವರು ... ದೇವಸ್ಥಾನಗಳನ್ನು ಕುರಿತು ವಚನಕಾರರು ನಡೆಯಿಸಿದ ವಿಚಾರ ಗಮನಾರ್ಹವಾದುದಾಗಿದೆ. ಅದರಲ್ಲಿ ಮೊದಲನೇ ಹೆಜ್ಜೆ ಎಂದರೆ ದೇವಸ್ಥಾನಗಳನ್ನು ನಿರಾಕರಿಸಿದ್ದು.

ಹೀಗೆ ಮಾಡುವುದರಿಂದ ಪುರೋಹಿತ ವರ್ಗದವರು ದೇವಸ್ಥಾನದ ನೆಪದಲ್ಲಿ, ಧರ್ಮದ ಹೆಸರಿನಲ್ಲಿ ಜನರನ್ನು ಶೋಷಿಸುವುದನ್ನು ತಪ್ಪಿಸುವುದರ ಜೊತೆಗೆ, ದೇವಸ್ಥಾನಗಳು ಕೆಲವರಿಗೆ ಪ್ರವೇಶವನ್ನು ದೊರಕಿಸುವ, ಇನ್ನೂ ಕೆಲವು ಹೀನ ಕುಲದವರೆಂಬ ಕಾರಣದಿಂದ ಪ್ರವೇಶವನ್ನು ನಿರಾಕರಿಸುವ ತಾರತಮ್ಯ ಭಾವನೆಗಳನ್ನು ತೊಡೆದು ಹಾಕುವುದೂ ಸಾಧ್ಯವಾಗುತ್ತದೆ ಎಂದು ಆಲೋಚಿಸಿದರು. ಇವರು ಮೂರ್ತಿ ಪೂಜೆಯನ್ನು ನಿರಾಕರಿಸಿದರು. ನಿರಾಕಾರಕ್ಕೆ ಸಮೀಪವಾದ ಸಂಕೇತ 'ಲಿಂಗ'ವೆಂದು ನಂಬಿದರು; ಅದನ್ನೇ ಎಲ್ಲೆಡೆ ಸಾರಿದರು. ಇದರಿಂದ ಭಕ್ತನಿಗೆ ಬಹಿರಂಗದ ದೇವಸ್ಥಾನಕ್ಕೆ ಹೋಗಬೇಕಾದ ಅಗತ್ಯವಿಲ್ಲದಂತೆ ಮಾಡಿದರು. ದೇವಾಲಯ ಮತ್ತು ದೇವರನ್ನು ಕುರಿತು ಬಸವಣ್ಣ –

"ಉಳ್ಳವರು ಶಿವಾಲಯ ಮಾಡುವರು

ನಾನೇನ ಮಾಡುವೆನು ಬಡವನಯ್ಯಾ

ಎನ್ನ ಕಾಲೇ ಕಂಬ, ದೇಹವೇ ದೇಗುಲ

ಶಿರವೇ ಹೊನ್ನ ಕಳಸವಯ್ಯ"

ಎಂದು ಹೇಳಿದ್ದಾರೆ. ಅಲ್ಲದೇ 'ಕಾಯಕವೇ ಕೈಲಾಸ' ಎಂದು ಬಸವಣ್ಣನವರು ಮಾಡುವ ಕೆಲಸವನ್ನು ಶ್ರದ್ಧೆ, ಭಕ್ತಿಯಿಂದ ಮಾಡಿದರೆ, ಅದು ಶಿವನಿಗೆ ಅರ್ಪಿತವಾಗುತ್ತದೆ ಎಂದು ಹೇಳಿದ್ದಾರೆ.

ಹೀಗೆ ಸ್ತ್ರೀ ಪುರುಷರ ನಡುವಣ ಭೇದವನ್ನು ಕುರಿತು ವಚನಕಾರರು ಪ್ರತಿಭಟನೆ ಸ್ತ್ರೀಯರಿಗೆ ಪುರುಷರೊಂದಿಗೆ ಸಾಮಾಜಿಕ ಸಮಾನತೆಯನ್ನು ತಂದು ಕೊಟ್ಟದ್ದಲ್ಲದೆ ಸಾಮಾಜಿಕವಾದ ಅಸಮಾನತೆಗಳನ್ನು ಕುರಿತು ಅವರು ತೋರಿದ ವರ್ಣ ವ್ಯವಸ್ಥೆಯಿಂದಾಗಿ, ಉತ್ತಮ ಜಾತಿ, ಅಧಮ ಜಾತಿ ಎಂಬ ತಾರ್ಕಿಕವಾದ ಅಸಮಾನತೆ ಸಮಾಜದಲ್ಲಿದ್ದುದನ್ನು ಕಂಡ ವಚನಕಾರರು, ತಾವು ಸ್ಥಾಪಿಸಿದ ಹೊಸ ಧರ್ಮದೊಳಕ್ಕೆ ಎಲ್ಲರನ್ನೂ ಕರೆದುಕೊಂಡು, ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿದ್ದು ವಿಶೇಷದ ಸಂಗತಿ. ವಚನ ಸಾಹಿತ್ಯವು ವೈಚಾರಿಕ ಆಲೋಚನೆಯಿಂದ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಶ್ರಮವಹಿಸಿದ್ದಾರೆ. ಹಾಗಾಗಿಯೇ ಈ ಕಾಲಘಟ್ಟವನ್ನು ವಚನ ಸಾಹಿತ್ಯ ಚಳುವಳಿ"ಯೆಂದು ಕರೆಯಬಹುದು.



Scanned with CamScanner